

# ಅನೂಷ್ಕಾ: ಸಿಗದ ಸಂಭಾವನೆ!



ಇತ್ತೀಚೆಗೆ ಬಿಡುಗಡೆಯಾಗಿದ್ದ 'ಬಾಂಬೆ ವೆಲ್ವೆಟ್' ಲೆಕ್ಕಾಚಾರವನ್ನೆಲ್ಲಾ ತಲೆಕೆಳಗು ಮಾಡಿ ದಯನೀಯ ಸೋಲು ಕಂಡಿದೆ. ಅದರ ಬೆನ್ನಲ್ಲೇ ಸಂಭಾವನೆ ಕುರಿತ ವದಂತಿಗಳೂ ಹರಡಲಾರಂಭಿಸಿವೆ.

ಅನೂಷ್ಕಾ ಈ ಚಿತ್ರದಲ್ಲಿ ನಟಿಸಿದ್ದು ಮಾತ್ರವಲ್ಲ, ಹಾಡೊಂದಕ್ಕೂ ದನಿಯಾಗಿದ್ದಳು. ಮೂಲಗಳ ಪ್ರಕಾರ ಅನೂಷ್ಕಾಗೆ ಸಂದಾಯವಾಗಿರುವುದು ಗಾಯನದ ಸಂಭಾವನೆ ಮಾತ್ರ. ಉಳಿದಂತೆ ಅಭಿನಯಕ್ಕಾಗಿ ಆಕೆಗೆ ಇನ್ನೂ ಸಂಭಾವನೆ ದಕ್ಕಿಲ್ಲವಂತೆ. ಚಿತ್ರ ಸೋತಿದೆ, ನಿರ್ಮಾಪಕರು ನಷ್ಟ ಅನುಭವಿಸಿದ್ದಾರೆ ಎಂದು ಅನೂಷ್ಕಾ ಅಷ್ಟಕ್ಕೇ ಸುಮ್ಮನಿರುತ್ತಿದ್ದಳೇನೋ. ಆದರೆ ಆಕೆಯ ಕೋಪಕ್ಕೆ ಕಾರಣ ಸಹನಟ ರಣಬೀರ್ ಕಪೂರ್‌ಗೆ ಪೂರ್ತಿ ಸಂಭಾವನೆ ಸಂದಾಯವಾಗಿರುವುದು. ರಣಬೀರ್‌ಗೆ ಸಂಭಾವನೆ ನೀಡಿ, ತನಗೆ ವಂಚಿಸಲಾಗಿದೆ ಎಂಬ ಅಸಮಾಧಾನ ಅನೂಷ್ಕಾಳಲ್ಲಿ ಉಂಟಾಗಿದೆಯಂತೆ.

'ಅನೂಷ್ಕಾ ಸಂಭಾವನೆ ವಿಷಯವಾಗಿ ಅದಕ್ಕೆ ಸಂಬಂಧಿಸಿದವರ ಹೊರತು ಬೇರೆ ಯಾರೊಂದಿಗೂ ಮಾತನಾಡುವುದಿಲ್ಲ. ಇಂತಹ ಸಂಗತಿಗಳನ್ನು ತಮ್ಮೊಳಗೇ ಅವರು ಪರಿಹರಿಸಿಕೊಳ್ಳುತ್ತಾರೆ' ಎಂದು ಅನೂಷ್ಕಾಳ ವಕ್ತಾರರು ಸ್ಪಷ್ಟನೆ ನೀಡಿದ್ದಾರೆ.

# ಮಾಧುರಿಯಿಂದ ಮೀನಾಕ್ಷಿ ತೆಕ್ಕೆಗೆ

ಸುಮಾರು 20 ವರ್ಷಗಳ ಹಿಂದೆಯೇ 'ಪಿ ಸೆ ಪಿಎಂ ತಕ್' ಚಿತ್ರದ ಕಥೆ ಹೆಣೆದಿದ್ದರು ನಿರ್ದೇಶಕ ಕುಂದನ್ ಶಾ. ಸ್ತ್ರೀ ಪಾತ್ರ ಕೇಂದ್ರಿತ ಸಿನಿಮಾವಾದ್ದರಿಂದ ಸಹಜವಾಗಿಯೇ ಅವರ ಬಯಕೆ ಇದ್ದದ್ದು ಮಾಧುರಿ ದೀಕ್ಷಿತ್ ನಾಯಕಿಯಾಗಬೇಕೆಂದು. ವೇಶ್ಯೆಯ ಪಾತ್ರವಾಗಿದ್ದರಿಂದ ಅಂತಹ ಸವಾಲಿನ ಪಾತ್ರವನ್ನು ಎದುರಿಸುವ ಛಾತಿಯ ನಟಿಯೂ ಬೇಕಿತ್ತು. ಆದರೆ ಕುಂದನ್ ಅಂದುಕೊಂಡಂತೆ ಆಗಲಿಲ್ಲ. ಸಿನಿಮಾ ಸೆಟ್ಟೇರಲೇ ಇಲ್ಲ. ಅದೇ ಕಥೆಯನ್ನು ಎರಡು ದಶಕಗಳ ಸಿನಿಮಾ ಜಾಯಮಾನಕ್ಕೆ ತಕ್ಕಂತೆ ತಿದ್ದಿ ಒಗ್ಗಿಸಿ ತೆರೆ ಮೇಲೆ ತಂದಿದ್ದಾರೆ ಅವರು. ವಿಶೇಷವೆಂದರೆ ಮಾಧುರಿ ದೀಕ್ಷಿತ್ ಹೆಸರನ್ನು ನೆನಪಿಸುವಂತಹ ನಟಿಗೇ ಈ ಪಾತ್ರ ಒಲಿದಿರುವುದು.

ಮೀನಾಕ್ಷಿ ದೀಕ್ಷಿತ್, ಚಿತ್ರರಸಿಕರಿಗೆ ಈ ಚಿತ್ರದ ಮೂಲಕ ಬಿ–ಟೌನ್‌ಗೆ ಪರಿಚಯವಾಗುತ್ತಿರುವ ಹೆಸರು. ಇಬ್ಬರ ಹೆಸರಲ್ಲೂ ದೀಕ್ಷಿತ್ ಇದ್ದರೂ ಇವರಿಗೆ ಯಾವುದೇ ಸಂಬಂಧವಿಲ್ಲವಂತೆ. ಮಾಧುರಿ ದೀಕ್ಷಿತ್ ಅವರಂತಹ ನಟಿಯನ್ನು ಮನಸಿನಲ್ಲಿಟ್ಟುಕೊಂಡು ಕಥೆ ಹೊಸೆದಿದ್ದ ಕುಂದನ್, ತನ್ನಂತಹ ಅನುಭವ ರಹಿತ ನವ ನಟಿಗೆ ಮಣೆ ಹಾಕಿರುವುದು ಮೀನಾಕ್ಷಿಗೆ ಅಚ್ಚರಿ ತಂದಿದೆ. ಈ ಚಿತ್ರದ ಅನುಭವವನ್ನು ಮೀನಾಕ್ಷಿ 'ಹೀರೊಯಿನ್‌ನಿಂದ ನಟಿಯಾಗಿ ಬೆಳೆದ ಪರಿವರ್ತನೆ' ಎಂದು ಹೇಳಿಕೊಂಡಿದ್ದಾಳೆ.

ಮಾಧುರಿಯಿಂದ ಸ್ಫೂರ್ತಿಗೊಂಡಿರುವುದಾಗಿ ಹೇಳಿಕೊಂಡಿರುವ ಕುಂದನ್ ಮಾಧುರಿ ದೀಕ್ಷಿತ್‌ಗೆ ಸಾಮ್ಯತೆಯ ಹೆಸರುಳ್ಳ ಕಾರಣಕ್ಕೇ, ಮೀನಾಕ್ಷಿಗೆ ಅವಕಾಶ ನೀಡಿದರೋ ಗೊತ್ತಿಲ್ಲ. ಏನೇ ಇರಲಿ, ಎರಡು ದಶಕದ ಬಳಿಕವೂ ಹೆಸರಿನ ಹೋಲಿಕೆಯುಳ್ಳ ನಟಿಗೇ ಈ ಸಿನಿಮಾ ಒಲಿದಿರುವುದು ಕಾಕತಾಳೀಯ ಎನ್ನಬಹುದು.

ಬಾಲಿವುಡ್ ಮಂದಿಗೆ ಹೊಸ ಮುಖವಾದರೂ ಮೀನಾಕ್ಷಿ ದಕ್ಷಿಣದ ಮಂದಿಗೆ ಪರಿಚಿತೆ. 'ದೂಕುಡು', 'ಬಿಲ್ಲಾ 2', 'ಬಾದ್‌ಷಾ' 'ತೆನಾಲಿ ರಾಮನ್' ಮುಂತಾದ ಚಿತ್ರಗಳಲ್ಲಿ ನಟಿಸಿರುವ ಈಕೆ, ಕನ್ನಡದ 'ಚಿನ್ನ ಚಿನ್ನ ಆಸೆ' ಚಿತ್ರಕ್ಕೂ ಬಣ್ಣ ಹಚ್ಚುತ್ತಿದ್ದಾಳೆ.

■ ಅಮಿ